# ದು. ಸರಸ್ವತಿ ಅವರ ‘ಸಣ್ತಿಮ್ಮಿ ರಾಮಾಯ್ಣ’ ಎಂಬ ಜನಕಥನ

**ಪ್ರಸನ್ನ ನಂಜಾಪುರ***

**DOI: https://doi.org/10.5281/zenodo.20614363**

**ABSTRACT**

ದು. ಸರಸ್ವತಿ ಅವರ ‘ಸಣ್ತಿಮ್ಮಿ ರಾಮಾಯ್ಣ’ ಏಕಾಂಕ ಕಥನವು ಪೌರಾಣಿಕ ಮಹಾಕಾವ್ಯವನ್ನು ಸಮಕಾಲೀನ ಸಾಮಾಜಿಕ ಮತ್ತು ಸ್ತ್ರೀವಾದಿ ಸಂವೇದನೆಗಳೊಂದಿಗೆ ಮುಖಾಮುಖಿಯಾಗಿಸುವ ವಿಶಿಷ್ಟ ಜನಕಥನವಾಗಿದೆ. ಗ್ರಾಮೀಣ ಮಹಿಳೆ ಸಣ್ತಿಮ್ಮಿಯ ನಿರೂಪಣೆಯಲ್ಲಿ ಮೂಡಿಬರುವ ಕೃತಿಯು, ಸೀತೆ, ಊರ್ಮಿಳೆ ಮತ್ತು ಶೂರ್ಪನಖಿಯಂತಹ ಶೋಷಿತ ಸ್ತ್ರೀ ಪಾತ್ರಗಳನ್ನು ಹೊಸ ದೃಷ್ಟಿಕೋನದಿಂದ ಕಟ್ಟಿಕೊಡುತ್ತದೆ. ಪುರುಷಪ್ರಧಾನ ವ್ಯವಸ್ಥೆಯ ದೋಷಗಳನ್ನು, ಅಧಿಕಾರದ ಮದವನ್ನು ಮತ್ತು ಮದುವೆ–ಕುಟುಂಬದ ಹೆಸರಿನಲ್ಲಿ ಹೆಣ್ಣಿನ ಮೇಲಾಗುವ ಶೋಷಣೆಯನ್ನು ಇಲ್ಲಿ ಕಟುವಾಗಿ ವಿಮರ್ಶಿಸಲಾಗಿದೆ. ದುಡಿಮೆಯ ಮಹತ್ವ, ಶ್ರಮಿಕ ವರ್ಗದ ಪರವಾದ ಕಾಳಜಿ ಹಾಗೂ ಪ್ರಾದೇಶಿಕ ಐತಿಹ್ಯಗಳ ಸಮ್ಮಿಲನ ಈ ಕಥನದಲ್ಲಿ ಎದ್ದು ಕಾಣುತ್ತದೆ. ಸೀತೆಯ ಆಡಳಿತಾತ್ಮಕ ತಂತ್ರಗಾರಿಕೆ ಹಾಗೂ ಅಂತಿಮವಾಗಿ ಪುರುಷ ಪ್ರಧಾನ ಪ್ರಭುತ್ವವನ್ನು ಧಿಕ್ಕರಿಸಿ ಪ್ರಕೃತಿಯೊಡನೆ ಉಳಿಯುವ ನಿರ್ಧಾರವು, ಶೋಷಿತರ ಆತ್ಮವಿಶ್ವಾಸ ಮತ್ತು ಮಹಿಳೆಯರ ಸ್ವತಂತ್ರ ಅಸ್ತಿತ್ವವನ್ನು ಎತ್ತಿಹಿಡಿಯುತ್ತದೆ. ಪುರಾಣವನ್ನು ವರ್ತಮಾನದ ಸಾಂಸ್ಕೃತಿಕ ಹಾಗೂ ಸಾಮಾಜಿಕ ತಲ್ಲಣಗಳಿಗೆ ಹಿಡಿದ ಕೈಗನ್ನಡಿಯಾಗಿ ಮರುಸೃಷ್ಟಿಸಿದ ಪರಿಯು ಇಲ್ಲಿ ಅನಾವರಣಗೊಂಡಿದೆ.

**KEYWORDS:** ಸಣ್ತಿಮ್ಮಿ ರಾಮಾಯ್ಣ, ಸ್ತ್ರೀವಾದಿ ಸಂವೇದನೆ, ಪುರುಷಪ್ರಧಾನ ವ್ಯವಸ್ಥೆ, ಜನಕಥನ, ಸಾಮಾಜಿಕ ವಿಮರ್ಶೆ.

* **ಡಾ. ಪ್ರಸನ್ನ ನಂಜಾಪುರ,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ದಿ ರೂರಲ್ ಕಾಲೇಜು, ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ.

ಬಹು ಸಂಸ್ಕೃತಿಯಲ್ಲಿ ಬದುಕುತ್ತಿರುವ ಈ ನೆಲದಲ್ಲಿ ಯಾವುದೇ ಪುರಾಣ ಕಥನಗಳು ಏಕಮಾದರಿಯಾಗಿಲ್ಲ. ಅವು ಕೂಡ ಜನತೆಯು ಬದುಕುತ್ತಿರುವ ಕಾಲದೇಶಗಳ ಜೀವನ ಮೌಲ್ಯಗಳಿಗೆ ಅನುಗುಣವಾಗಿ ಮರುರಚನೆಗೊಳ್ಳುತ್ತ, ಮರು ವ್ಯಾಖ್ಯಾನಗಳಿಗೆ ತೆರೆದುಕೊಳ್ಳುತ್ತ ಬಹುರೂಪಿಗಳಾಗಿ ಕಂಡುಬರುತ್ತವೆ. ರಾಮಾಯಣ ಮತ್ತು ಮಹಾಭಾರತಗಳು ಇಲ್ಲಿನ ಜನತೆಯ ಬದುಕನ್ನು ಬಹುವಾಗಿ ಪ್ರಭಾವಿಸಿರುವಂತಹ ಮಹಾಕಥನಗಳಾಗಿವೆ. ಹಾಗಾಗಿ ಇವುಗಳಿಗೆ ಸಂಬಂಧಿಸಿದ ಕಥೆಗಳು, ಉಪಕಥೆಗಳು, ಐತಿಹ್ಯಗಳು ಜನಬದುಕಿನೊಳಗೆ ಮರುಕಥನಗಳಾಗುತ್ತ ಇಂದಿಗೂ ಪುನರ್ ರಚಿಸಲ್ಪಡುತ್ತಲೇ ಸಾಗುತ್ತಿವೆ. ಈ ಕಥನಗಳು ಲಿಖಿತವಾಗಿರಬಹುದು ಅಥವಾ ಮೌಖಿಕವಾಗಿರಬಹುದು ಅವು ಆಯಾ ಕಾಲಕ್ಕೆ ಹೊಸದಾಗಿಯೇ ರಚನೆಗೊಂಡಿವೆ. ಜನತೆಯ ಬದುಕಿನ ಸಾಂಸ್ಕೃತಿಕ ಆಲೋಚನೆಗಳು ಬದಲಾದಂತೆಲ್ಲ ಈ ಕಥನಗಳು ಆಯಾ ವರ್ತಮಾನದ ಸಂವೇದನೆಗಳಿಗೆ ತಮ್ಮನ್ನು ಮರುರೂಪಿಸಿಕೊಂಡಿವೆ. ಜನರು ಬದುಕುತ್ತಿರುವ ಸಂಸ್ಕೃತಿ, ಸಮಾಜ, ಪ್ರಕೃತಿ, ಪ್ರಭುತ್ವಗಳಂತಹ ವಿಭಿನ್ನ ಪರಿಸರಕ್ಕನುಗುಣವಾಗಿ ಆಯಾ ಸಂವೇದನೆಯ ಹಿನ್ನೆಲೆಯಲ್ಲಿ ವಿಭಿನ್ನವಾಗಿಯೇ ಕಟ್ಟಲ್ಪಟ್ಟಿವೆ. ಪ್ರಸ್ತುತ ದು. ಸರಸ್ವತಿ ಅವರ ಸಣ್ತೆಮ್ಮಿ ಹೇಳುವ 'ರಾಮಾಯ್ಣ' ಎಂಬ ಪುರಾಣ ಕಥನವು ಇಲ್ಲಿ ಜನಕಥನವಾಗಿ ಮರುನಿರೂಪಣೆಗೊಂಡಿದ್ದು ಸಮಕಾಲೀನ ಸಾಮಾಜಿಕ ಸಂವೇದನೆಯೊಂದಿಗೆ ಮುಖಾಮುಖಿಯಾಗಿದೆ.

"ತಿಣುಕಿದನು ಫಣಿರಾಜ ರಾಮಾಯಣದ ಕವಿಗಳ ಭಾರದಲಿ" ಎಂಬ ಕುಮಾರವ್ಯಾಸನ ಮಾತನ್ನು ಗಮನಿಸಿದರೆ ಆ ಕಾಲಕ್ಕಾಗಲೇ ಹಲವಾರು ರಾಮಾಯಣಗಳು ಕನ್ನಡದಲ್ಲಿ ರಚನೆಯಾಗಿದ್ದವು ಎಂಬುದು ತಿಳಿಯುತ್ತದೆ. ಆ ನಂತರದಲ್ಲೂ ಕನ್ನಡ ಸಾಹಿತ್ಯದಲ್ಲಿ ಸಮಕಾಲೀನ ಸಂವೇದನೆಗಳಿಗೆ ಅನುಗುಣವಾಗಿ ಅನೇಕ ರಾಮಾಯಣ ಕಥನಗಳು, ಕಾವ್ಯಗಳು, ಮಹಾಕಾವ್ಯಗಳು ರಚನೆಗೊಂಡಿವೆ. ಈ ಪರಂಪರೆಯ ಮುಂದುವರೆದ ಕೊಂಡಿಯೇ ದು. ಸರಸ್ವತಿ ಅವರ ಈ 'ರಾಮಾಯ್ಣ' ಎಂಬ ಏಕಾಂಕ ಕಥನ. ರಾಮಾಯಣ ಎಂಬ ಜನಪ್ರಿಯ ಮಹಾಕಥನವೊಂದು ಇಲ್ಲಿ ಜನತೆಯ ಇಹಕಥನವಾಗಿ ಸಂಕ್ಷಿಪ್ತವಾಗಿ ನಿರೂಪಣೆಗೊಂಡಿದ್ದು ಜನ ಬದುಕಿನ ಇರುವಿಕೆಯಿಂದಾಗಿ ಗಮನಸೆಳೆಯುತ್ತದೆ. ಈ ಕಥನವು ಕೇವಲ ನಿರೂಪಣೆಗೊಂಡಿಲ್ಲ ಜೊತೆಜೊತೆಗೆ ಜನತೆಯು ಅದಕ್ಕೆ ತೋರುವ ಪ್ರತಿಕ್ರಿಯೆಯೂ ದಾಖಲಾಗುತ್ತ ಸಾಗುತ್ತದೆ. ಜನಪ್ರತಿನಿಧಿಯಾಗಿ ಕಾಣುವ ಇಲ್ಲಿನ ನಿರೂಪಕಿ ಯಾವುದೋ ಕಾಲದ ಕಥೆಯನ್ನು ತನ್ನ ಕಾಲದಲ್ಲಿಟ್ಟು ಅದನ್ನು ನಿರೂಪಿಸುವಾಗ ವಿಶ್ಲೇಷಣೆ ಮತ್ತು ವಿಮರ್ಶೆಗೆ ಒಳಪಡಿಸುತ್ತಾಳೆ. ಹಾಗಾಗಿ ಇಲ್ಲಿ ಪೌರಾಣಿಕ ಕಥನವು ಸಮಕಾಲೀನ ಸಾಮಾಜಿಕ ಬದುಕಿನ ಪರಿವೇಷವನ್ನು ಪಡೆದುಕೊಂಡಿದೆ. ಸಾಮಾಜಿಕ ಬದುಕಿನೊಂದಿಗೆ ಪ್ರಾದೇಶಿಕ ಮತ್ತು ಪ್ರಾಕೃತಿಕ ನಂಬಿಕೆಯ ಆಯಾಮಗಳು ಇದರಲ್ಲಿ ಬೆರೆತಿವೆ. ತುಮಕೂರಿನ ದೇವರಾಯನ ದುರ್ಗ ಮತ್ತು ಕೋಲಾರದ ಆವನಿಯಲ್ಲಿರುವ ಐತಿಹ್ಯಗಳು ಇಲ್ಲಿನ ಸಾಮಾಜಿಕ

ಸಂವೇದನೆಗೆ ಜೀವಂತ ಸಾಕ್ಷಿಗಳಾಗಿ ಒದಗಲ್ಪಟ್ಟಿವೆ. ಪುರಾಣ ಕಾಲದ ಶೋಷಿತ ಸ್ತ್ರೀ ಪಾತ್ರಗಳು ಸಮಕಾಲೀನ ಸಾಮಾಜಿಕ ಸಂವೇದನೆಗಳೊಂದಿಗೆ ಮನಬಿಚ್ಚಿ ಮಾತನಾಡುತ್ತವೆ. ಆ ಮೂಲಕ ತಮ್ಮನ್ನು ತಾವು ಹೊಸದಾಗಿ ಅರ್ಥೈಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತವೆ. ಪುರುಷ ಪ್ರಧಾನ ಸಂಸ್ಕೃತಿಯಿಂದ ಆಚೆ ಬಂದು ಸಮಕಾಲೀನ ಸಾಂವಿಧಾನಾತ್ಮಕ ಅರಿವಿನಲ್ಲಿ ಹೊಸ ಬದುಕಿಗಾಗಿ ಆಲೋಚಿಸುತ್ತವೆ.

ದುಡಿಮೆಯ ತತ್ವದಿಂದ ಆರಂಭವಾಗುವ ಕಥೆಯು ಪ್ರಭುತ್ವವಿರಲೀ, ಪ್ರಜೆಗಳಿರಲೀ ದುಡಿಮೆಗೆ ಸಮಾನವಾಗಿರಬೇಕು ಎಂಬ ಸೂಕ್ಷ್ಮತೆಯನ್ನು ಕಟ್ಟಿಕೊಡುತ್ತದೆ. ಜನಕ ಮಹಾರಾಜ ಒಬ್ಬ ಸಾಮಾನ್ಯ ರೈತನಂತೆ ನೇಗಿಲು ಹಿಡಿದು ಉಳುಮೆಗೆ ತೊಡಗುವುದನ್ನು ಇಂದಿನ ರಾಜಕಾರಣಿಗಳ ನಡೆಯೊಂದಿಗೆ ಇಟ್ಟು ತೌಲನಿಕವಾಗಿ ವಿಮರ್ಶಿಸುತ್ತಲೇ ದುಡಿಮೆಯನ್ನು ಸ್ವಾವಲಂಬಿ ಬದುಕಿನ ಮೂಲ ತತ್ವವಾಗಿ ಪ್ರತಿಪಾದಿಸಲಾಗಿದೆ. ಜನಕನಿಗೆ ಹೊಲದಲ್ಲಿ ಸಿಗುವ ಸೀತೆಯ ಪ್ರಸಂಗವು ಸೀತೆಯು ದುಡಿಮೆ ಸಂಸ್ಕೃತಿಯ ಹಿನ್ನೆಲೆಯಿಂದ ಬಂದವಳೆಂಬುದನ್ನು ಸಾಬೀತುಪಡಿಸುತ್ತದೆ. ಹಾಗಾಗಿಯೇ ಅವಳಲ್ಲಿ ಕಥನದುದ್ದಕ್ಕೂ ಕಷ್ಟ ಸಹಿಷ್ಣುತೆಯಿದೆ. ಆ ಕಾರಣಕ್ಕಾಗಿಯೇ ಅವಳ ಸಾಮಾಜಿಕ ಸಂವೇದನೆಗಳು ಇಲ್ಲಿ ಗಮನಸೆಳೆಯುತ್ತವೆ. ಕಥಾನಿರೂಪಕಿ ಸಣ್ತಿಮ್ಮಿಯು ಇಲ್ಲಿನ ಮಹಿಳಾ ಪಾತ್ರಗಳೊಂದಿಗೆ ಪರಕಾಯ ಪ್ರವೇಶ ಮಾಡುತ್ತಲೇ ಅವುಗಳ ಕಷ್ಟಸುಖಗಳಿಗೆ ತನ್ನ ಸಾಮಾಜಿಕ ಸಂವೇದನೆಯ ಮೂಲಕ ಧನಿಯಾಗುತ್ತಾಳೆ. ಸೀತೆಯ ಸ್ವಯಂವರದ ಸಂದರ್ಭವನ್ನು ಬಿಲ್ಲು ಬಾಣದ ಭಾರಕ್ಕಿಂತಲೂ ಬದುಕಿನ ಭಾರ ದೊಡ್ಡದು ಎಂಬ ನೆಲೆಯಲ್ಲಿ ವಿಶ್ಲೇಷಿಸುವ ಸಣ್ತಿಮ್ಮಿಯು ಮದುವೆಯ ಸಂದರ್ಭದಲ್ಲಿ ಹೆಣ್ಣಿನ ಇಷ್ಟಕಷ್ಟಗಳನ್ನು ಪರಿಗಣಿಸದ ಪುರುಷ ಪ್ರಧಾನ ನಡೆಯನ್ನು ಕಟುವಾಗಿಯೇ ಪ್ರಶ್ನಿಸಿದ್ದಾಳೆ. ಇಲ್ಲಿ ಬದುಕಿನ ಭಾರ ಎಂಬುದು ಕೌಟುಂಬಿಕ ಜವಾಬ್ದಾರಿಯಾಗಿದ್ದು ಮದುವೆಯು ಅಂತಹ ಪ್ರಾಮುಖ್ಯತೆಯನ್ನು ಪಡೆದುಕೊಳ್ಳಬೇಕೆಂಬ ಧ್ವನಿಯು ಇಲ್ಲಿ ವ್ಯಕ್ತವಾಗಿದೆ. ಹಾಗಾಗಿಯೇ ತನ್ನ ಹೆಂಡತಿ ಊರ್ಮಿಳೆಯನ್ನು ಬಿಟ್ಟು ವನವಾಸಕ್ಕೆ ಹೋಗುವ ಲಕ್ಷ್ಮಣನಾಗಲೀ, ಸೀತೆಯ ಜೊತೆಯಲ್ಲೇ ವನವಾಸ ಕಳೆದರೂ ಕೊನೆಯಲ್ಲಿ ತ್ಯಜಿಸುವ ರಾಮನಾಗಲೀ, ಸೀತೆಯನ್ನು ಅಪಹರಿಸುವ ರಾವಣನಾಗಲೀ ಇಲ್ಲಿ ಸಣ್ತಿಮ್ಮಿಯ ಸಾಮಾಜಿಕ ವಿಮರ್ಶೆಯಿಂದ ತಪ್ಪಿಸಿಕೊಳ್ಳಲಾಗಿಲ್ಲ.

ರಾವಣನ ತಂಗಿಯಾದ ಶೂರ್ಪನಖಿ ಎಂಬ ರಾಜಕುಮಾರಿಗೆ ಒದಗಿದ ಕೇಡುಕನ್ನು ವಿಶ್ಲೇಷಿಸುವ ಸಂದರ್ಭ ಅತ್ಯಂತ ಗಮನಾರ್ಹವಾದದ್ದು, ಇದು ಇಂದಿನ ಹೆಣ್ಣಿನ ಸಂಕಟಗಳೊಂದಿಗೆ ಬಂದುನಿಲ್ಲುತ್ತದೆ. ಬದುಕಿನ ಬಗೆಗೆ ನೂರಾರು ಕನಸುಗಳನ್ನು ಕಾಣುತ್ತಿದ್ದ ಯೌವನದಲ್ಲಿ ಪುರುಷ ವಿಕಾರದ ಕ್ರೌರ್ಯಕ್ಕೆ ಸಿಕ್ಕು ತನ್ನ ಮೂಗು ಮೊಲೆಗಳನ್ನು ಕಳೆದುಕೊಳ್ಳುವ ಹೆಣ್ಣೊಬ್ಬಳ ಆರ್ತನಾದವಿದೆ. ಸೌಂದರ್ಯ ಪ್ರಜ್ಞೆಗೆ ಹೆಚ್ಚು ಒತ್ತುಕೊಡುವ ಇಂದಿನ ಕಾಲದಲ್ಲಿ ಶೂರ್ಪನಖಿಯು ಯೌವನದಲ್ಲಿ ಅನುಭವಿಸಿರುವ ಸಂಕಟಗಳನ್ನು ಹೇಗೆ ಗ್ರಹಿಸಬೇಕು ಎಂಬ ವಿವೇಚನೆಯನ್ನು ನಿರೂಪಕಿ ಸಣ್ತಿಮ್ಮಿ ಪ್ರತಿಪಾದಿಸಿದ್ದಾಳೆ. ಶೂರ್ಪನಖಿಯ ಪಾತ್ರವನ್ನು ಬಹುತೇಕ

ಹಾಸ್ಯದ ಮೂಲಕ ಮನರಂಜನೆ ಎಂಬಂತೆ ಕಟ್ಟಿಕೊಡುತ್ತ ಬಂದಿರುವ ಸಾಂಪ್ರದಾಯಿಕ ಶೋಷಕ ನಡೆಯನ್ನು ಇಲ್ಲಿ ಮರು ಆಲೋಚನೆಗೆ ಒಳಮಾಡಿದೆ, ಇಂತಹ ಮನರಂಜನೆ ಹಿಂದಿರುವ ಮನೋವಿಕಾರಗಳು ತಿಳಿಯಬೇಕಾದರೆ ಶೂರ್ಪನಖಿಯ ಸಂಕಟಗಳನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಯಾಕೆಂದರೆ ಶೂರ್ಪನಖಿ ಇಲ್ಲಿ ಪುರುಷ ವಿಕಾರದ ಕೆಡುಕುಗಳಿಗೆ ಬಲಿಯಾಗುವ ಸಮಕಾಲೀನ ಸ್ತ್ರೀಯರ ಪ್ರಾತಿನಿಧಿಕ ದನಿಯಾಗಿ ಗೋಚರಿಸುತ್ತಾಳೆ. ಶೂರ್ಪನಖಿಯ ಅಣ್ಣ ರಾವಣ ತನ್ನ ತಂಗಿಗೆ ಒದಗಿದ ಅವಮಾನಕ್ಕೆ ಪ್ರತೀಕಾರವಾಗಿ ಸೀತೆಯನ್ನು ಅಪಹರಿಸುವುದು ಸಣ್ತಿಮ್ಮಿಯ ವಿಮರ್ಶೆಯಲ್ಲಿ ರಾವಣ ನಡೆಯನ್ನು ಕುರಿತು "ಅಲ್ಲ ಮೂಗು ಮಲೆ ಕುಯ್ಯಿ ಅಂದೋನ್‌ಯಾರು? ಕುಯ್ದೋನೊ ಯಾರು? ಅವ್ರನ ಬುಟ್ಟು ಏನೂ ಮಾಡ್ದಿರೋ ಸೀತೇನ ವತ್ತಾಕ್ಕಂಡು ವೊದ್ನಲ್ಲ ಸಯ್ಯಾ?" ಎಂದು ಪ್ರಶ್ನಿಸುವ ಸಣ್ತಿಮ್ಮಿಯು ಇತ್ತಂಡಗಳಲ್ಲಿ ಯಾರ ಪರವೂ ನಿಲ್ಲದೆ ನಿಷ್ಪಕ್ಷಪಾತವಾಗಿ ಶೋಷಿತ ಸ್ತ್ರೀ ಪಾತ್ರಗಳ ಪರ ನಿಲ್ಲುವುದು ಗಮನಾರ್ಹವಾಗಿದೆ.

ಈ ಕಥನದಲ್ಲಿ ಬರುವ ಪ್ರಮುಖ ಸ್ತ್ರೀಪಾತ್ರಗಳೆಂದರೆ ಸೀತೆ, ಶೂರ್ಪನಖಿ ಮತ್ತು ಊರ್ಮಿಳೆ. ಈ ಶೋಷಿತ ಪಾತ್ರಗಳು ಪರಸ್ಪರ ಸಂಧಿಸಿ ಸಂವಾದಿಸುವುದು ಇಲ್ಲಿ ವಿಶೇಷವಾಗಿದೆ. ಸೀತೆ ಮತ್ತು ಊರ್ಮಿಳೆ, ಸೀತೆ ಮತ್ತು ಶೂರ್ಪನಖಿಯರ ಭೇಟಿಯಲ್ಲಿ ಇನ್ನಷ್ಟು ಸಾಮಾಜಿಕ ಅಂಶಗಳು ತೆರೆದುಕೊಳ್ಳುತ್ತವೆ. ಊರ್ಮಿಳೆಯು ತನ್ನ ಹದಿನಾಲ್ಕು ವರ್ಷಗಳ ಒಂಟಿತನವನ್ನು ವನ ಬೆಳೆಸುವುದರಲ್ಲಿ ಕಳೆದಿದ್ದಾಳೆ. ಅವುಗಳನ್ನೆ ತನ್ನ ಮಕ್ಕಳೆಂದು ಪೋಷಿಸಿದ್ದಾಳೆ. ವಯೋ ಸಹಜ ಮಾತೃತ್ವದಿಂದ ವಂಚಿತಳಾದ ಸಂದರ್ಭದಲ್ಲಿ ಊರ್ಮಿಳೆಯು ಪ್ರಕೃತಿ ಪೋಷಣೆಯಲ್ಲಿ ಅದರ ಕೊರತೆಯನ್ನು ನೀಗಿಕೊಂಡಿದ್ದಾಳೆ. ವನವಾಸದಿಂದ ಹಿಂತಿರುಗಿಬಂದ ಮೇಲೆ ಸೀತೆಯು ಮೊದಲು ಭೇಟಿಯಾಗುವ ವ್ಯಕ್ತಿ ಎಂದರೆ ಊರ್ಮಿಳೆಯೇ. ಅದೇ ರೀತಿ ರಾಮನಿಂದ ತ್ಯಜಿಸಲ್ಪಟ್ಟು ಅರಣ್ಯದಲ್ಲಿ ತನ್ನ ಮಕ್ಕಳೊಡನೆ ಬದುಕುವ ಸಂದರ್ಭದಲ್ಲಿ ಸೀತೆಯು ಶೂರ್ಪನಖಿಯನ್ನು ಭೇಟಿಯಾಗುತ್ತಾಳೆ. ಊರ್ಮಿಳೆ ಅರಮನೆಯಲ್ಲಿ ಶೋಷಿತಳಾದರೆ ಶೂರ್ಪನಖಿ ಅರಣ್ಯದಲ್ಲಿ ಶೋಷಣೆಗೆ ಒಳಗಾಗುತ್ತಾಳೆ. ಸೀತೆ ಈ ಎರಡೂ ಪರಿಸರದಲ್ಲೂ ಸಂಕಟಗಳನ್ನು ಎದುರಿಸಬೇಕಾಗುತ್ತದೆ. ಪುರುಷ ವಿಕಾರದ ಕ್ರೌರ್ಯಕ್ಕೆ ತನ್ನ ಸಹಜ ಸೌಂದರ್ಯವನ್ನು ಕಳೆದುಕೊಳ್ಳುವ ಶೂರ್ಪನಖಿಯು ಮುಖಮರೆಮಾಚಿಕೊಂಡು ಅರಣ್ಯದ ಮಧ್ಯದಲ್ಲಿ ಊರ್ಮಿಳೆಯ ರೀತಿಯಲ್ಲಿಯೇ ಹಣ್ಣು, ಹೂವಿನ ತೋಟ ಮಾಡಿಕೊಂಡು ಒಂಟಿಯಾಗಿದ್ದಾಳೆ. ಇವಳನ್ನು ಭೇಟಿಯಾಗುವ ಸೀತೆಯು "ಅಯ್ಯೋ ನಂತಾಯೆ ಜೀವಕೊಡೊ, ಜೀವ ಉಳಿಸೋ ಕೆಲಸ ದೊಡ್ಡದು, ಅಂತೋರು ಮುಖ ಮುಚ್ಕಂಡು ಬದುಕಬಾರದು. ಮುಖ ಮುಚ್ಕ ಬೇಕಾದೋರು ಜೀವ್ಕೆ ಹಾನಿ ಮಾಡೋರು" ಎನ್ನುತ್ತಾಳೆ. ಸೀತೆಯ ಈ ಮಾತುಗಳಲ್ಲಿ ಸಮಕಾಲೀನ ಸಂವೇದನೆಯ ದನಿಯಿದೆ. ತಮಗಾದ ಅನ್ಯಾಯವನ್ನು ಮುಚ್ಚಿಟ್ಟು ಬದುಕುವುದಕ್ಕಿಂತ ಶೋಷಕ ವ್ಯವಸ್ಥೆಯನ್ನು ಎದುರಿಸಿ ಬದುಕಬೇಕು ಎಂಬ ಮಾತುಗಳು ಶೋಷಿತರಲ್ಲಿ ಆತ್ಮ ವಿಶ್ವಾಸವನ್ನು ತುಂಬುತ್ತವೆ. ಇಲ್ಲಿ "ದುಃಖಿಗೆ

ದುಃಖಿಯೇ ಬಂಧು" ಎನ್ನುವ ಹಾಗೆ ಶೋಷಿತರು ಪರಸ್ಪರ ಸೇರುವುದು ಮತ್ತು ಆ ಮೂಲಕ ಸಾಮೂಹಿಕ ದನಿಯಾಗಿ ಹೊರಹೊಮ್ಮಬೇಕಾದ ಅರಿವಿನ ಅಗತ್ಯವನ್ನು ಇದು ಪ್ರತಿಪಾದಿಸುತ್ತದೆ.

ಭರತನ ಮೂಲಕ ಪ್ರಭುತ್ವದ ನಡೆ ಮತ್ತು ಅದರ ಪರಿಣಾಮಗಳ ಕುರಿತ ಚಿತ್ರಣವಿದ್ದರೆ ಸೀತೆಯ ಮೂಲಕ ಅದಕ್ಕೆ ಪರಿಹಾರಗಳ ಕುರಿತ ಚಿಂತನೆ ವ್ಯಕ್ತವಾಗಿದೆ. ಇದನ್ನೊಂದು ಉಪಕಥೆಯ ಮೂಲಕ ನಿರೂಪಿಸಲಾಗಿದೆ. ಅಣ್ಣನಿಲ್ಲದ ಕೊರಗಿನಲ್ಲಿ ಭರತ ಸರಿಯಾಗಿ ರಾಜ್ಯವಾಳುವುದನ್ನು ಮರೆತ ಇದರಿಂದ ಜನ ಸರಿಯಾಗಿ ಸುಂಕವನ್ನು ಕಟ್ಟಿಲ್ಲವಾದ್ದರಿಂದ ಖಜಾನೆಯು ಬರಿದಾಯಿತು. ರಾಮ ವನವಾಸದಿಂದ ಮರಳಿ ಬಂದಾಗ ಈ ಪರಿಸ್ಥಿತಿಯನ್ನು ನೋಡಿ ಏನುಮಾಡಬೇಕೆಂದು ತಿಳಿಯದೇ ಯೋಚಿಸುವಾಗ ಈ ಸಂಕಷ್ಟಕ್ಕೆ ಸೀತೆಯೇ ಪರಿಹಾರವನ್ನು ಸೂಚಿಸುತ್ತಾಳೆ. ಮನೆಗೆರಡೆರಡು ಕುಂಬಳ ಬೀಜಗಳನ್ನು ಕೊಟ್ಟು ಅವುಗಳು ಚಿಗುರಿ ಬಳ್ಳಿಯಾಗಿ ಕಾಯಿ ಬಿಟ್ಟಾಗ ಎರಡೆರಡು ಕುಂಬಳಕಾಯಿಯನ್ನು ಅರಮನೆಗೆ ಕೊಡಬೇಕು. ಇಲ್ಲದಿದ್ದರೆ ಕುಂಬಳಕಾಯಿ ಗಾತ್ರದ ಬಂಗಾರ ಕೊಡಬೇಕು ಎಂಬ ನಿಯಮವನ್ನು ಅನುಸರಿಸುವಂತೆ ರಾಮನಿಗೆ ಸೂಚಿಸುತ್ತಾಳೆ. ರಾಮ ಹಾಗೆಯೇ ಮಾಡುತ್ತಾನೆ. ಯಾವುದೇ ಬೀಜಗಳು ಮೊಳೆಯದೆ ಪ್ರಜೆಗಳು ನಿಯಮದಂತೆ ಕುಂಬಳಕಾಯಿ ಗಾತ್ರದ ಬಂಗಾರವನ್ನು ತಂದು ಅರಮನೆಗೆ ಒಪ್ಪಿಸುತ್ತಾರೆ. ಆಗ ಖಜಾನೆ ತುಂಬುತ್ತದೆ, ಇದರಿಂದ ರಾಮನಿಗೆ ಆಶ್ಚರ್ಯವಾಗಿ ಬೀಜಗಳು ಮೊಳೆಯದರ ಬಗ್ಗೆ ಸೀತೆಯನ್ನು ಕೇಳಿದಾಗ ಸೀತೆಯು ತಾನು ಹುರಿದ ಬೀಜಗಳನ್ನು ಕೊಟ್ಟುದಾಗಿ ಹೇಳುತ್ತಾಳೆ. ಕೃಷಿ ಕುಟುಂಬದ ಹಿನ್ನೆಲೆಯಿಂದ ಬಂದಿರುವ ಸೀತೆಯ ಜಾಣ್ಮೆ ಮತ್ತು ತಂತ್ರಗಾರಿಕೆಯು ಫಲಿಸುತ್ತದೆ. ಅವಕಾಶ ಸಿಕ್ಕರೆ ಆಡಳಿತಕ್ಕೂ ಸಿದ್ದ ಎಂಬ ಸೂಚನೆಯನ್ನು ಇದು ಧ್ವನಿಸುತ್ತದೆ. ಪುರುಷ ಕೇಂದ್ರಿತ ಚಿಂತನೆಗಳಿಗೆ ಅನುಗುಣವಾಗಿ ಬದುಕಬೇಕಾದ ಸಾಂಪ್ರದಾಯಿಕ ನಡೆಯನ್ನು ನೀಗಿಕೊಳ್ಳುತ್ತಿರುವ ಇಂದಿನ ಸ್ತ್ರೀಯು ಆಡಳಿತದಲ್ಲಿ ತನ್ನ ಪಾಲ್ಗೊಳ್ಳುವಿಕೆಯನ್ನು ಗುರುತಿಸಿಕೊಳ್ಳುತ್ತಿರುವುದರ ಸಂಕೇತವಾಗಿದೆ. ಜನಪದರ ಕಥೆಗಳೆಂದರೆ ಹೀಗೆ ಇರುತ್ತವೆ. ಯಾವ ಪಾತ್ರಗಳು ಅಸಹಾಯಕತೆಯಿಂದ ಮುಖ್ಯ ಭೂಮಿಕೆಗೆ ಬರದೆ ನಿರ್ಲಕ್ಷ್ಯಕ್ಕೆ ಒಳಗಾಗಿರುತ್ತವೆಯೋ ಅವು ತಮ್ಮ ಬೌದ್ಧಿಕ ಸ್ವಸಾಮರ್ಥ್ಯದ ಮೇಲೆ ಮುನ್ನೆಲೆಗೆ ಬಂದು ತಮ್ಮ ಇರುವಿಕೆಯನ್ನು ದಾಖಲಿಸುತ್ತವೆ. ಇಲ್ಲಿನ ಸೀತೆಯ ತಂತ್ರಗಾರಿಕೆಯಲ್ಲಿ ಅಂತಹ ಆಶಯ ವ್ಯಕ್ತವಾಗಿದೆ.

ಸೀತೆಯು ವನವಾಸ ಕಾಲದಲ್ಲಿ ಗೆಣೆಕಾರ ರಾಮನನ್ನು ಕಂಡಿದ್ದರೆ ಅರಮನೆಗೆ ಬಂದಾಗ ರಾಜರಾಮನ ದರ್ಶನವಾಗುತ್ತದೆ. ಗರ್ಭಿಣಿಯಾದ ಸೀತೆಯನ್ನು ಪರಿತ್ಯಜಿಸುವ ಸಂದರ್ಭದಲ್ಲಿ ಸೀತೆಯ ಬಗೆಗೆ ರಾಮನಿಗೆ ಅಪಾರವಾದ ಪ್ರೀತಿ ಇದ್ದರೂ ಜನರ ಅಪವಾದದಿಂದ ಮನಸ್ಸಿಲ್ಲದಿದ್ದರೂ ಅಧಿಕಾರದ ಪಟ್ಟಭದ್ರ ಹಿತಾಸಕ್ತಿಯ ಹಿನ್ನೆಲೆಯಲ್ಲಿ ಕಾಡಿನಲ್ಲಿ ಬಿಟ್ಟು ಬರಲು ಆದೇಶಿಸುತ್ತಾನೆ. ಈ ಸಂದರ್ಭವನ್ನು ಸಣ್ತಿಮ್ಮಿಯು "ಗಂಡ ಇರ್ಲಿ ಇಲ್ದಿರ್ಲಿ ಒಂಟ್ಯಾಗಿ ಮಕ್ಳು ಸಾಕೋ ಹೆಂಗಸ್ರು ಏಸ್ ಜನಿಲ್ಲ ಈಗಲೂವೆ" ಎಂದು ವ್ಯಾಖ್ಯಾನಿಸುವ ಮೂಲಕ ಸೀತೆಯ

ಬದುಕಿನೊಂದಿಗೆ ಇಂದಿನ ಸಾಮಾಜಿಕ ಬದುಕನ್ನು ಸಮೀಕರಿಸಿ ತೌಲನಿಕವಾಗಿ ವಿಶ್ಲೇಷಿಸುತ್ತಾಳೆ. ಅಂದಿನಿಂದ ಇಂದಿನವರೆಗೂ ಕುಟುಂಬದಿಂದ ಒಂಟಿಯಾಗಿ ಬದುಕಿನ ಭಾರ ಹೊರುತ್ತ ಬದುಕುತ್ತಿರುವ ಅನೇಕ ಸ್ತ್ರೀಯರ ಪರವಾದ ಕಾಳಜಿಯು ಇಲ್ಲಿ ವ್ಯಕ್ತವಾಗಿದೆ. ಹೀಗೆ ಒಂದೊಂದು ಘಟನೆಯಲ್ಲಿಯೂ ಈ ರಾಮಾಯಣವು ಸಾಮಾಜಿಕ ಸಂವೇದನೆಗೆ ದನಿಯಾಗುತ್ತ ಸಾಗುತ್ತದೆ.

ಅಶ್ವಮೇಧಯಾಗವು ಇಲ್ಲಿ ಜನಪ್ರಿಯತೆಯಲ್ಲಿರುವ ಪ್ರಭುತ್ವವೊಂದು ತನ್ನ ಅಧಿಕಾರ ಸಾಮರ್ಥ್ಯದ ಪರೀಕ್ಷಾರ್ಥವಾಗಿ ನಡೆಸುವ ಉದ್ದೇಶ ಪೂರ್ವಕ ಯುದ್ಧಾಹ್ವಾನವಾಗಿದೆ. ಆ ಮೂಲಕ ಪ್ರತಿರೋಧ ಇಲ್ಲದಿದ್ದರೆ ಸಾಮ್ರಾಜ್ಯ ವಿಸ್ತರಣೆ ಮತ್ತು ಪ್ರಾಂತ್ಯಗಳ ಮೇಲೆ ತನ್ನ ಅಧಿಕಾರದ ಸ್ಥಾಪನೆಯ ಗುರಿಹೊಂದಿದೆ. ಅದರಲ್ಲಿ ಕಾಡಿನಲ್ಲಿರುವ ಲವಕುಶರು ಕುದುರೆಗಳನ್ನು ಕಟ್ಟಿಹಾಕುವ ಮೂಲಕ ಪ್ರಾದೇಶಿಕ ಅಸ್ಮಿತೆಯನ್ನು ಪ್ರತಿಪಾದಿಸಿದ್ದಾರೆ. ಕೋಲಾರದ ಆವನಿಯಲ್ಲಿ ಲವಕುಶರು ಕುದುರೆ ಕಟ್ಟಿಹಾಕಿದ್ದ ಗೂಟ ಇದೆ ಎಂಬ ಐತಿಹ್ಯವು ಇಲ್ಲಿ ಪ್ರಾದೇಶಿಕ ಸಂಸ್ಕೃತಿಯ ಹೆಗ್ಗುರುತಾಗಿ ಕಂಡುಬರುತ್ತದೆ. ಪ್ರತಿರೋಧಗಳು ತಮ್ಮ ತಮ್ಮ ಅಸ್ಮಿತೆಗಾಗಿ ಸಂಘರ್ಷವನ್ನುಂಟು ಮಾಡಿದರೆ ಶರಣಾಗತವು ಅಥವಾ ಸೋಲು ಅಧೀನಕ್ಕೆ ಒಳಪಡುತ್ತದೆ. ಇಂತಹ ಪರಿಸ್ಥಿತಿಯನ್ನು ಎದುರಿಸುವ ರಾಮ ಇಲ್ಲಿ ಲವ ಕುಶರೊಂದಿಗೆ ತನ್ನ ಸಂಬಂಧವನ್ನು ಮರು ಸ್ಥಾಪಿಸಿಕೊಳ್ಳುವುದರ ಮೂಲಕ ಪ್ರತಿರೋಧವನ್ನು ಶಮನಮಾಡಿಕೊಳ್ಳುವುದನ್ನು ಕಾಣಬಹುದು. ಕೌಟುಂಬಿಕ ನೆಲೆಯಲ್ಲಿ ನೋಡಿದಾಗ ಸೀತೆ ಮಾತ್ರ ಅರಮನೆಗೆ ಹೋಗದೆ ಪ್ರಭುತ್ವವನ್ನು ಧಿಕ್ಕರಿಸಿ ಪ್ರಕೃತಿಯಲ್ಲಿಯೇ ಉಳಿದುಕೊಳ್ಳುತ್ತಾಳೆ. ಈ ಸಂದರ್ಭದಲ್ಲಿ ನಿರೂಪಕಿಯ ಮೂಲಕ ಕುಟುಂಬ ನಿರ್ವಹಣೆಯಲ್ಲಿ ಪುರುಷನಿಗೆ ಇರಬೇಕಾದ ಹೊಣೆಗಾರಿಕೆಯು ಪ್ರತಿಪಾದನೆಯಾಗಿದೆ.

ಇಂತಹ ಪ್ರಮುಖ ಘಟನೆಗಳಲ್ಲದೇ ಇನ್ನೂ ಕೆಲವು ಗಮನ ಸೆಳೆಯುವ ವ್ಯಾಖ್ಯಾನಗಳನ್ನು ಇಲ್ಲಿ ಕಾಣಬಹುದಾಗಿದೆ. ಸೇತುವೆ ಕಟ್ಟುವ ಸಂದರ್ಭದಲ್ಲಿ ಕಪಿಗಳ ಮೂಲಕ ಇಂದಿನ ಕೂಲಿಕಾರ್ಮಿಕರು ತಮ್ಮನ್ನು ಬಿಸಿಲು ಬೆವರಿಗೆ ಒಡ್ಡಿಕೊಳ್ಳುತ್ತಿರುವ ಶ್ರಮಸಂಸ್ಕೃತಿಯ ಪರ ಸಾಮಾಜಿಕ ಚಿಂತನೆಯಿದೆ. ಕಟ್ಟುವಲ್ಲಿ ಬೌದ್ಧಿಕ ಶ್ರಮಕ್ಕಿಂತಲೂ ಭೌತಿಕಶ್ರಮಕ್ಕೆ ಇರುವ ಮಹತ್ವವನ್ನು ಇಲ್ಲಿ ಪ್ರತಿಪಾದಿಸಲಾಗಿದೆ. ಅಗ್ನಿಪರೀಕ್ಷೆಯ ಸಂದರ್ಭದಲ್ಲಿ ಮಲ, ಗೊಬ್ಬರ, ಹೊಲ, ಆಹಾರಗಳು ಹೇಗೆ ನಮ್ಮ ಬದುಕನ್ನು ಮಡಿಮೈಲಿಗೆಯಾಚೆಗೆ ಆವರ್ತನವಾಗಿ ಆವರಿಸಿಕೊಂಡಿವೆ ಎಂಬ ತಾತ್ವಿಕತೆಯಿದೆ. ಪುರಾಣ ಕಥನವು ಸಾಮಾಜಿಕರಣಗೊಳ್ಳುವುದಕ್ಕೆ ಇಂತಹ ಹಲವಾರು ವಿಚಾರಗಳು ಕಾರಣವಾಗಿವೆ. ಜನಕ ಮಹಾರಾಜನು ಶಿವನಿಂದ ಬಿಲ್ಲುಬಾಣಗಳನ್ನು ಪಡೆದ ವಿಚಾರಕ್ಕೆ ಒಂದು ಸಾಮಾಜಿಕ ಹಿನ್ನೆಲೆಯಿದೆ. ಜನಕ ಮಹಾರಾಜನ ತಂದೆ ಹಿಂದೊಮ್ಮೆ ಶಿವನಿಗೆ ಕಷ್ಟದ ಸಮಯದಲ್ಲಿ ಸಹಾಯಮಾಡಿದ್ದಕ್ಕೆ ಪ್ರತಿಯಾಗಿ ಶಿವನು ಈ ಬಿಲ್ಲುಬಾಣಗಳನ್ನು ಕೊಟ್ಟಿದ್ದಾಗಿದೆ ಎಂಬ ಈ ಸಾಮಾಜಿಕ ವರ್ತನೆಯಲ್ಲಿ ಶಿವನು ದೇವನಾದರೂ ಜನಪದರ ಆಶಯಕ್ಕನುಗುಣವಾಗಿ ಮಾನವ ಸ್ವರೂಪಿಯಾಗಿ ಮಾನವ ಸಂಬಂಧಗಳ ಮಹತ್ವವನ್ನು ಪ್ರತಿಪಾದಿಸಿರುವುದನ್ನು ಗುರುತಿಸಬಹುದು.

ವನವಾಸ ಕಾಲದಲ್ಲಿ ತುಮಕೂರಿನ ದೇವರಾಯನ ದುರ್ಗದಲ್ಲಿ ಸೀತೆ ಸ್ನಾನಮಾಡಿರುವ ವಿಚಾರವೂ ಅಷ್ಟೇ ಪುರಾಣದ ಮೂಲಕ ಸ್ಥಳೀಯ ಬದುಕಿನ ಅನಾವರಣವಾಗಿದೆ ಅಥವಾ ಸ್ಥಳೀಯ ಬದುಕಿನ ಮೂಲಕ ಪುರಾಣದ ನಿರೂಪಣೆಯಾಗಿದೆ. ಒಟ್ಟಿನಲ್ಲಿ ಒಂದಕ್ಕೊಂದು ಪೂರಕವಾಗಿ ಹೆಣೆಯಲ್ಪಟ್ಟಿವೆ.

ಒಟ್ಟಾರೆಯಾಗಿ ದು. ಸರಸ್ವತಿ ಅವರ ಸಣ್ತಿಮ್ಮಿ ಹೇಳಿರುವ ಈ ರಾಮಾಯ್ಣ ಎಂಬ ಪುರಾಣವು ಸ್ತ್ರೀವಾದಿ ಚಿಂತನ ಕ್ರಮದಿಂದ ನೋಡಿರುವ ಸಮಕಾಲೀನ ಸಾಮಾಜಿಕ ವಿಮರ್ಶೆಯಾಗಿದೆ. ಆ ಮೂಲಕ ವರ್ತಮಾನದ ಜನತೆಯ ಸಾಂಸ್ಕೃತಿಕ ಸಂಕಟಗಳಿಗೆ ಕನ್ನಡಿಯಾಗಿದೆ. ಪುರಾಣದ ಚೌಕಟ್ಟಿನೊಳಗೆ ಆಯಾ ಪಾತ್ರಗಳು ಸಾಂದರ್ಭಿಕವಾಗಿ ಹೊಸ ರೂಪವನ್ನು ಪಡೆದು ತಮ್ಮ ತಮ್ಮ ನಡವಳಿಕೆಗಳಿಂದಾಗಿ ಸಾಮಾನ್ಯ ಜನರ ಕಷ್ಟಸುಖಗಳಿಗೆ ಸ್ಪಂದಿಸುತ್ತವೆ. ದು. ಸರಸ್ವತಿ ಅವರು ಕಥಾ ನಿರೂಪಣ ತಂತ್ರದಲ್ಲಿ ಸಣ್ತಿಮ್ಮಿ ಎಂಬ ಗ್ರಾಮೀಣ ಸ್ತ್ರೀಯ ಮೂಲಕ ನಿರೂಪಣೆಯ ಜೊತೆಗೆ ಅದಕ್ಕೆ ಪ್ರತಿಕ್ರಿಯೆಯಾಗಿ ವ್ಯಾಖ್ಯಾನ ಮತ್ತು ವಿಮರ್ಶೆಯನ್ನು ಜೊತೆ ಜೊತೆಯಾಗಿಯೇ ಕಟ್ಟಿಕೊಟ್ಟಿದ್ದಾರೆ. ಹಾಗಾಗಿ ಇದು ಕ್ರಿಯೆ ಮತ್ತು ಪ್ರತಿಕ್ರಿಯೆಗಳಿಂದ ಕೂಡಿರುವ ಕಥನವಾಗಿದೆ. ಪುರಾಣದ ಕಾಲದ ರಾಜಪ್ರಭುತ್ವ ಮತ್ತು ವರ್ತಮಾನದ ಪ್ರಜಾಪ್ರಭುತ್ವದ ಕಾಲದ ಜನತೆಯ ಸಾಮಾಜಿಕ ಬದುಕು ಇಲ್ಲಿ ತೌಲನಿಕವಾಗಿ ವಿಶ್ಲೇಷಣೆಗೊಂಡಿದೆ. ಆ ಮೂಲಕವಾಗಿ ಜನಮಾನಸದಲ್ಲಿ ಹಚ್ಚ ಹಸಿರಾಗಿರುವ ಹಿಂದಿನ ಕಾಲದ ಪುರಾಣ ಕಥನವನ್ನು ತಮ್ಮ ಕಾಲದ ಸಂವೇದನೆಯ ಅಚ್ಚಿನಲ್ಲಿಟ್ಟು ಪುನರ್ ಎರಕಹೊಯ್ದಿದ್ದಾರೆ. ಹೀಗೆ ರಾಮಾಯಣ ಕಥನದ ಆದ್ಯಂತವನ್ನು ಪ್ರಮುಖ ಘಟನೆಗಳೊಂದಿಗೆ ಸಂಕ್ಷಿಪ್ತವಾಗಿ ಸಾಮಾಜಿಕ ಆಯಾಮಗಳೊಂದಿಗೆ ಕಟ್ಟಿಕೊಟ್ಟಿರುವುದರಿಂದ ಇದು ಒಂದು ಕಥೆಯೋ, ಏಕಾಂಕವೋ ಆಗಿಯಷ್ಟೆ ಉಳಿದುಕೊಳ್ಳದೇ ಕನ್ನಡದಲ್ಲಿ ರಚನೆಯಾಗಿರುವ ರಾಮಾಯಣಗಳ ಪರಂಪರೆಯ ಮುಂದುವರೆದ ರೂಪವಾಗಿದೆ.

**ಆಕರ ಗ್ರಂಥ:**

1. ಸರಸ್ವತಿ ದು. (2018), ಸಣ್ತಿಮ್ಮಿ ಪುರಾಣ, ಹೊನ್ನಾವರ: ಕವಿ ಪ್ರಕಾಶನ.